ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ

**ಸಿ.ಸಿ. ಸಂಖ್ಯೆಃ 1/2024**

ಪಿರ್ಯಾದಿ : ರಾಜ್ಯ, ಪರವಾಗಿ ಬಾಳೂರು ಪೊಲೀಸ್ ಠಾಣೆ,

ವಿರುದ್ಧ

ಆರೋಪಿತರು:

**1.** ಅಬ್ದುಲ್ ಅಜೆದ್, ವಯಸ್ಸು ಸುಮಾರು 33 ವರ್ಷ, ಬಿನ್ ಆಸಿರ್ ಅಲಿ, ವಾಸಃ ಕೆಳಗೂರು ಟೀ ಎಸ್ಟೇಟ್ ಲೈನ್ ಮನೆ, ಕೆಳಗೂರು ಗ್ರಾಮ, ಬಾಳೂರು ಹೋಬಳಿ, ಮೂಡಿಗೆರೆ ತಾಲ್ಲೂಕು. ಸ್ವಂತ ಊರುಃ ರಕ್ಷಾಸಿನಿ ಪಹರ್ ಗ್ರಾಮ, ಜುಲಿ ತಾಲ್ಲೂಕು, ಗೋಲ್ ಪುರ ಜಿಲ್ಲೆ, ಅಸ್ಸಾಂ ರಾಜ್ಯ.

**2.** ಸಹಾ ಆಲಂ, ವಯಸ್ಸು ಸುಮಾರು 34 ವರ್ಷ, ಬಿನ್ ಜಲಾಲ್ ಉದ್ದೀನ್, ವಾಸಃ ಕೆಳಗೂರು ಟೀ ಎಸ್ಟೇಟ್ ಲೈನ್ ಮನೆ, ಕೆಳಗೂರು ಗ್ರಾಮ, ಬಾಳೂರು ಹೋಬಳಿ, ಮೂಡಿಗೆರೆ ತಾಲ್ಲೂಕು. ಸ್ವಂತ ಊರುಃ ನಂಗ್ಲೀಚಾರ್ ಗ್ರಾಮ, ಮಂಗಲ್ ದಾಯ್ ತಾಲ್ಲೂಕು, ದಾರಂ ಜಿಲ್ಲೆ, ಅಸ್ಸಾಂ ರಾಜ್ಯ.

**3.** ರಾಜು ಬಲಿ, ವಯಸ್ಸು ಸುಮಾರು 34 ವರ್ಷ, ಬಿನ್ ಮತ್ ಲಬ್ ಅಲಿ, ವಾಸಃ ಕೆಳಗೂರು ಟೀ ಎಸ್ಟೇಟ್ ಲೈನ್ ಮನೆ, ಕೆಳಗೂರು ಗ್ರಾಮ, ಬಾಳೂರು ಹೋಬಳಿ, ಮೂಡಿಗೆರೆ ತಾಲ್ಲೂಕು. ಸ್ವಂತ ಊರುಃ ಜುರ್ ಬಿಲ್ ಗ್ರಾಮ, ಲಾಹೋರಿ ಘಾಟ್ ತಾಲ್ಲೂಕು, ಮುರಿಗಾಂ ಜಿಲ್ಲೆ, ಅಸ್ಸಾಂ ರಾಜ್ಯ.

**4.** ರಿಷದ್ ಅಲಿ ಯಾನೆ ಅಬ್ದುಲ್, ವಯಸ್ಸು ಸುಮಾರು 42 ವರ್ಷ, ಬಿನ್ ಖುದ್ ಸಲಿ, ವಾಸಃ ಸಂಪಿಗೆ ಖಾನ್ ಎಸ್ಟೇಟ್ ಲೈನ್ ಮನೆ, ಸಂಪಿಗೆ ಖಾನ್ ಗ್ರಾಮ, ಬಾಳೂರು ಹೋಬಳಿ, ಮೂಡಿಗೆರೆ ತಾಲ್ಲೂಕು. ಸ್ವಂತ ಊರುಃ ಪಾಬುಗಡಿ ಗ್ರಾಮ, ಬುರಗಾಂ ತಾಲ್ಲೂಕು, ಮುರಿಗಾಂ ಜಿಲ್ಲೆ, ಅಸ್ಸಾಂ ರಾಜ್ಯ.

**5.** ಐಝೂಲ್ ಓಕ್, ವಯಸ್ಸು ಸುಮಾರು 40 ವರ್ಷ, ಬಿನ್ ಮರ್ತುಜ್ ಅಲಿ, ವಾಸಃ ಸಂಪಿಗೆ ಖಾನ್ ಎಸ್ಟೇಟ್ ಲೈನ್ ಮನೆ, ಸಂಪಿಗೆ ಖಾನ್ ಗ್ರಾಮ, ಬಾಳೂರು ಹೋಬಳಿ, ಮೂಡಿಗೆರೆ ತಾಲ್ಲೂಕು. ಸ್ವಂತ ಊರುಃ ಕೋಲ್ಬಾರಿ ಕೋಸರಿ ಗಾಂ ಗ್ರಾಮ, ಮಾಯಂಗ್ ತಾಲ್ಲೂಕು, ಮುರಿಗಾಂ ಜಿಲ್ಲೆ, ಅಸ್ಸಾಂ ರಾಜ್ಯ.

ದೋಷಾರೋಪಣೆ

ಶ್ರೀ. ವಿಶ್ವನಾಥ್ ಎ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆಗಳು ಏನೆಂದರೆಃ-

ದಿನಾಂಕಃ 17.09.2023 ರಂದು ರಾತ್ರಿ ಸುಮಾರು 11.00 ರ ಸಮಯದಲ್ಲಿ ಬಾಳೂರು ಪೊಲೀಸ್ ಠಾಣಾ ವ್ಯಾಪ್ತಿಯ ಸುಂಕಸಾಲೆ ಗ್ರಾಮ ಪಂಚಾಯತಿಯ ಅವರಮನೆ ತಲಗೂರು ಅಸೆಸ್ಮೆಂಟ್ ಸಂಖ್ಯೆ 30 ರಲ್ಲಿ ಚಾಸಾ9-ಪನ್ನಕೃಷ್ಣ ರವರ ಮಾಲೀಕತ್ವದಲ್ಲಿರುವ ಸಂಪಿಗೆ ಖಾನ್ ಎಸ್ಟೇಟ್ ನಲ್ಲಿ ಕೆಲಸ ಮಾಡುತ್ತಿರುವ ಚಾಸಾ4-ನೂರುಲ್ ಇಸ್ಲಾಂ ರವರನ್ನು ಚಾಸಾ2-ಲೋಕ್ಮನ್ ಅಲಿ ರವರು ಕರೆದುಕೊಂಡು ಹೋಗಲೆಂದು ಚಿಕ್ಕಮಗಳೂರು ತಾಲ್ಲೂಕು ಬೆಟ್ಟದ ಮಳಲಿ ಊರಿನಿಂದ ಚಾಸಾ1-ಶರತ್ ಕುಮಾರ್ ರವರ ವಾಹನ ನೋಂದಣಿ ಸಂಖ್ಯೆ ಕೆಎ-14-ಎನ್-2828 ನೇ ಸಿಲ್ವರ್ ಬಣ್ಣದ ಮಾರುತಿ ಓಮಿನಿಯಲ್ಲಿ ಚಾಸಾ1-ಶರತ್ ಕುಮಾರ್, ಚಾಸಾ2-ಲೋಕ್ಮನ್ ಅಲಿ ಮತ್ತು ಚಾಸಾ3-ಉಮೇಶ್ ರವರು ಬಂದು ಸಂಪಿಗೆ ಖಾನ್ ಎಸ್ಟೇಟ್ ಲೈನ್ ಮುಂದೆ ಓಮಿನಿ ಗಾಡಿಯನ್ನು ಸ್ವಲ್ಪ ಸಮಯ ನಿಲ್ಲಿಸಿ ಮುಂದೆ ರಸ್ತೇಲಿ ಹೋಗಿದ್ದನ್ನು ಕಂಡ ಆರೋಪಿತರುಗಳಾದ ನೀವುಗಳೆಲ್ಲರೂ ಏಕೋದ್ದೇಶದಿಂದ ನಿಮ್ಮ ಪೈಕಿ 4 ನೇ ಆರೋಪಿ 1 ನೇ ಆರೋಪಿಗೆ ಓಮಿನಿ ಗಾಡಿಯನ್ನು ಸ್ಕೂಟಿಯಲ್ಲಿ ಫಾಲೋ ಮಾಡು ಎಂದು ಹೇಳಿದ್ದು, ನಂತರ 3 ಮತ್ತು 5 ನೇ ಆರೋಪಿತರ ಜೊತೆ ಓಮಿನಿ ಗಾಡಿ ಬೆನ್ನಟ್ಟುವಾಗ, 1 ನೇ ಆರೋಪಿಯಾದ ನೀವು ನಿಮ್ಮ ಬಾಬ್ತು ವಾಹನ ನೋಂದಣಿ ಸಂಖ್ಯೆ ಕೆಎ-21-ಕ್ಯೂ-0518 ನೇ ಬಿಳಿ ಬಣ್ಣದ ಹೋಂಡಾ ಆಕ್ಟೀವಾ ಸ್ಕೂಟಿಯ ಹಿಂಬದಿ ಸೀಟ್ ನಲ್ಲಿ 2 ನೇ ಆರೋಪಿಯನ್ನು ಕೂರಿಸಿಕೊಂಡು ಸ್ಕೂಟಿ ಚಾಲನೆ ಮಾಡಿಕೊಂಡು ಸಂಪಿಗೆ ಖಾನ್ ಎಸ್ಟೇಟ್ ತೋಟದ ಗೇಟ್ ಮುಂದೆ ಹಾದು ಹೋಗಿರುವ ರಾಜ್ಯ ಹೆದ್ದಾರಿ-106 ರ ಟಾರು ರಸ್ತೇಲಿ ಚಾಸಾ1 ರವರ ಬಾಬ್ತು ಓಮಿನಿ ಗಾಡಿಯನ್ನು ಅಡ್ಡಗಟ್ಟಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ **341** ಸಹವಾಚಕ ಕಲಂ **34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**2**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರುಗಳಾದ ನೀವುಗಳು ಏಕೋದ್ದೇಶದಿಂದ ಮುಂದುವರೆದು, ಚಾಸಾ1 ರಿಂದ 3 ರವರಿಗೆ ನಮ್ಮ ಲೇಬರ್ ಕರೆದುಕೊಂಡು ಹೋಗೋಕೆ ಬಂದಿರಾ, ಸುವ್ವರ್ ಕೇ ಬಚ್ಚೆ ಮಾರೋ, ಕಾಟೋ ಎಂದು ಕೊಲೆ ಬೆದರಿಕೆ ಹಾಕಿದ್ದಲ್ಲದೇ, ಒಂದು ಲಕ್ಷ ದುಡ್ಡು ಫೋನ್ ಪೇ ಮಾಡಿ, ನಿಮ್ಮನ್ನು ಮತ್ತು ಕಾರ್ ಅನ್ನು ಬಿಟ್ಟು ಕಳಿಸ್ತೀವಿ, ಇಲ್ಲಾಂದ್ರೆ ಇಲ್ಲೇ ನಿಮ್ಮನ್ನು ಮುಗಿಸುತ್ತೀವಿ ಎಂದು ಕೊಲೆ ಬೆದರಿಕೆ ಹಾಕಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ **506** ಸಹವಾಚಕ ಕಲಂ **34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**3**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರುಗಳಾದ ನೀವುಗಳು ಏಕೋದ್ದೇಶದಿಂದ ಮುಂದುವರೆದು, ಚಾಸಾ1 ರವರ ಬಾಬ್ತು ಓಮಿನಿ ಕಾರಿನ ಟೈರ್ ಪಂಚರ್ ಮಾಡಲೆಂದು ನಿಮ್ಮ ಪೈಕಿ 1 ನೇ ಆರೋಪಿಯಾದ ನೀವು ನಿಮ್ಮ ಜೇಬಿನಲ್ಲಿದ್ದ ಚಾಕುವನ್ನು ತೆಗೆದು

ಚಾಕುವಿನಿಂದ ಚುಚ್ಚಲು ಹೋಗಿದ್ದನ್ನು ಕಂಡ ಚಾಸಾ1 ರವರು ತಡೆಯಲೆಂದು ಡೋರ್ ತೆಗೆದು ಇಳಿಯಲು ಹೋಗುವಾಗ 4 ನೇ ಆರೋಪಿಯಾದ ನೀವು ಡೋರ್ ಅನ್ನು ವಾಪಾಸ್ಸು ಜೋರಾಗಿ ಅಮುಕಿದಾಗ ಚಾಸಾ1 ರವರ ಬಲಕೈ ಮಧ್ಯ ಬೆರಳು ಡೋರ್ ಮಧ್ಯೆ ಸಿಕ್ಕಿ ಹಾಕಿಕೊಂಡು ಪೆಟ್ಟಾಗಿ ಅವರಿಗೆ ರಕ್ತಗಾಯ ಉಂಟಾಗಿ ಜೋರಾಗಿ ಕೂಗಿಕೊಂಡಿದ್ದನ್ನು ಕೇಳಿದ 4 ನೇ ಆರೋಪಿಯಾದ ನೀವು ಕೈ ಬಿಟ್ಟ ನಂತರ ಚಾಸಾ1 ರವರು ಡೋರ್ ನಿಂದ ಇಳಿದು 1 ನೇ ಆರೋಪಿಯಾದ ನಿಮ್ಮ ಕೈಯಲ್ಲಿದ್ದ ಚಾಕುವನ್ನು ಕಿತ್ತುಕೊಳ್ಳಲೆಂದು ಪರಸ್ಪರ ನೂಕಾಡಿದಾಗ ಚಾಸಾ1 ರವರ ಎಡಗೈ ತೋರು ಬೆರಳಿಗೆ, ಎಡ ಕೈ ಹೆಬ್ಬೆರಳಿಗೆ, ಬಲ ಕೆನ್ನೆಗೆ, ಎಡ ಕೆನ್ನೆಗೆ ರಕ್ತ ಗಾಯವನ್ನುಂಟು ಮಾಡಿರುತ್ತೀರಿ ಹಾಗೂ ನೀವುಗಳೆಲ್ಲರೂ ಸೇರಿ ರೂಂನಲ್ಲಿ ಸೌದೆ ಒಟ್ಟಲಲ್ಲಿ ಇರುವ ಒಣಗಿದ ಒಂದು ಸಿಲ್ವರ್ ಮರದ ದೊಣ್ಣೆ ತೆಗೆದುಕೊಂಡು ಚಾಸಾ1 ರಿಂದ 3 ರವರಿಗೆ ಹೊಡೆದಾಗ ಅವರ ಎರಡೂ ತೊಡೆಗಳ ಹಿಂದೆ ಪೆಟ್ಟು ಬಿದ್ದು ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ **324** ಸಹವಾಚಕ ಕಲಂ **34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**4**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರುಗಳಾದ ನೀವುಗಳು ಏಕೋದ್ದೇಶದಿಂದ ಮುಂದುವರೆದು, ಓಮಿನಿ ಹಿಂದಿನ ಸೀಟ್ ನಲ್ಲಿ ಕುಳಿತಿದ್ದ ಚಾಸಾ2 ರವರಿಗೆ 4 ನೇ ಆರೋಪಿಯಾದ ನೀವು ಸುತ್ ಮಾರೆ ನಿ ಮಾತರ್ ಚೂತ್ ಎಂದು ಕೈಯಿಂದ ಮುಷ್ಠಿ ಕಟ್ಟಿ ಚಾಸಾ2 ರವರ ಮುಖಕ್ಕೆ ಗುದ್ದಿಗಾಗ, ಚಾಸಾ2 ರವರ ಮೂಗಿನಿಂದ ರಕ್ತ ಬಂದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ ಹಾಗೂ ನೀವುಗಳು ಚಾಸಾ1 ರಿಂದ 3 ರವರನ್ನು ಓಮಿನಿ ಒಳಗೆ ಎಳೆದಾಡಿ ಮೈ-ಕೈಗೆ ಕೈಯಿಂದ ಹೊಡೆದು ನೋವುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ **323** ಸಹವಾಚಕ ಕಲಂ **34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**5**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರುಗಳಾದ ನೀವುಗಳು ಏಕೋದ್ದೇಶದಿಂದ ಮುಂದುವರೆದು, ಓಮಿನಿ ಗಾಡಿಯಿಂದ ಚಾಸಾ1 ರಿಂದ 3 ರವರನ್ನು ಇಳಿಸಿ ರಾಜ್ಯ ಹೆದ್ದಾರಿ 106 ನೇ ಟಾರು ರಸ್ತೆ ಪಕ್ಕ ಇರುವ ಸಂಪಿಗೆಖಾನ್ ಎಸ್ಟೇಟ್ ಲೈನ್ ಮನೆಗಳಿಗೆ ಹೊಂದಿಕೊಂಡಂತೆ ಇರುವ ಒಂದು ರೂಂ ಒಳಗೆ ಅವರನ್ನು ಅಕ್ರಮವಾಗಿ ಕೂಡಿ ಬಂದಿಸಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ **342** ಸಹವಾಚಕ ಕಲಂ **34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ.

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ? ಅವುಗಳು ನಿಮಗೆ ಅರ್ಥವಾಯಿತೇ?

1 ರಿಂದ 5 ನೇ ಆರೋಪಿತರ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

1 ರಿಂದ 5 ನೇ ಆರೋಪಿತರ ಉತ್ತರಃ

(ಆರೋಪಿತರಿಗೆ ದಿನಾಂಕ 24.12.2024 ರಂದು ದೋಷಾರೋಪಣೆಯನ್ನು ಓದಿ ಹೇಳಿದ್ದನ್ನು ನ್ಯಾಯಾಲಯದಲ್ಲಿ ಹಾಜರಿದ್ದ ಶ್ರೀ ಮೋಹಿದ್ದೀನ್ ಅರಾಫತ್ ವಕೀಲರು ಆರೋಪಿತರಿಗೆ ಅವರಿಗೆ ತಿಳಿಯುವ ಹಿಂದಿ ಭಾಷೆಯಲ್ಲಿ ಅನುವಾದಿಸಿ ಹೇಳಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

ಸಹಿ/-

ಮೂಡಿಗೆರೆ<br>ದಿನಾಂಕಃ 24.12.2024

ಪ್ರಧಾನ ಸಿವಿಲ್ ನ್ಯಾಯಾಧೀಶರು<br>ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.

1 ನೇ ಆರೋಪಿಯ ಸಹಿಃ

2 ನೇ ಆರೋಪಿಯ ಸಹಿಃ

3 ನೇ ಆರೋಪಿಯ ಸಹಿಃ

4 ನೇ ಆರೋಪಿಯ ಸಹಿಃ

5 ನೇ ಆರೋಪಿಯ ಸಹಿಃ

ಭಾಷಾಂತರಕಾರರ ಸಹಿಃ